ವಿಷಯ : ರಾಜ್ಯದಲ್ಲಿ ಪಾನ ನಿರೋಧ ಜಾರಿಗೆ ತರುವುದು

1492 (2110)-ಶ್ರೀ ಟಿ. ಬಿ. ಜಯಚಂದ್ರ (ಕಳ್ಳಂಬೆಳ್ಳ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

1. ಕಳೆದ ಮೂರು ವರ್ಷಗಳಲ್ಲಿ ಅಬಕಾರಿ ಇಲಾಖೆ ಐಎಂಎಫ್‌ಎಲ್ ಮತ್ತು ಸಾರಾಯಿ ಮಾರಾಟದಿಂದ ವರ್ಷಂಪ್ರತಿ ಬಂದ ವರಮಾನವೆಷ್ಟು?

2. ಸರ್ಕಾರ ಪಾನ ನಿರೋಧ ಜಾರಿಗೆ ತರುವನೆಪದಿಂದ ಇಲಾಖೆಯಲ್ಲಿ ಆದಾಯ ಕುಂಠಿತವಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

3. ಪಾನ ನಿರೋಧ ನೀತಿಯನ್ನು ಜಾರಿಗೆತರುವ ಉದ್ದೇಶ ಸರ್ಕಾರಕ್ಕೆ ಇದೆಯೇ? ಹಾಗಿದ್ದರೆ ಆ ನೀತಿ ಏನು?

4) ಸರ್ಕಾರದ ಮಂದಗತಿಯ ಮತ್ತು ದ್ವಿಮುಖ ನೀತಿಯಿಂದಾಗಿ ಸರ್ಕಾರದ ಬೊಕ್ಕಸಕ್ಕೆ ನಷ್ಟವಾಗುವುದಿಲ್ಲವೆ?

ಶ್ರೀ ಜೆ. ಹೆಚ್. ಪಟೇಲ್ (ಮುಖ್ಯಮಂತ್ರಿಗಳು)

1) ಕಳೆದ ಮೂರು ವರ್ಷಗಳಲ್ಲಿ ಸಾರಾಯಿ ಮತ್ತು ಐಎಂಎಫ್‌ಎಲ್ ಮಾರಾಟದಿಂದ ಬಂದ ಆದಾಯ,

ಕೋಟಿ ರೂ.ಗಳಲ್ಲಿ

	ಸಾರಾಯಿ	ಐಎಂಎಫ್‌ಎಲ್
1994-95	547.30	118.03
1995-96	585.72	150.34
1996-97	608.90	145.43

2) ಇಲ್ಲ

3) ಸಾರಾಯಿ ಮಾರಾಟದ ಹಕ್ಕನ್ನು ಹರಾಜು ವ್ಯವಸ್ಥೆ ಬದಲಾಗಿ ಪರವಾನಗಿಯ ಮೂಲಕ ನೀಡಲಾಗುವುದು. ಹಾಗೂ ಸಾರಾಯಿ ಮಾರಾಟ ಅಂಗಡಿಗಳ ಸಂಖ್ಯೆಯನ್ನು ಗಣನೀಯವಾಗಿ ಕಡಿತ ಮಾಡಲಾಗುವುದು. ಈ ಹೊಸ ವ್ಯವಸ್ಥೆಯನ್ನು ಹೇಗೆ ಜಾರಿಗೆ ತರಬೇಕೆಂಬ ವಿವರಗಳನ್ನು ಸಚಿವ ಸಂಪುಟದ ಉಪ ಸಮಿತಿ ಪರಿಶೀಲಿಸುತ್ತಿದೆ.

4) ಇಲ್ಲ.